ಶ್ರೀ ಎಂ.ಸಿ. ನಾಣಯ್ಯ : ಇವರಿಗೆ ಕಂಪ್ಯೂಟರ್ ಕೊಟ್ಟಮೇಲೆ, ಅದನ್ನು ಮಾನಿಟರ್ ಮಾಡುವವರು ಯಾರು ಎಂದು. That monitoring work you should do. You should get the information from the High Court or the District Court. As far as the Government is concerned, we don't have information at all as to which cases have been filed and which cases have been disposed of. This information you should get it from the High Court or the District court. I don't have that information with me.

ಬೆಂಗಳೂರು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಣಿ ಮಾಡಿಕೊಂಡವರ ಸಂಖ್ಯೆ.

380 - ಶ್ರೀ ರಾಮಲಿಂಗಾರೆಡ್ಡಿ, (ಜಯನಗರ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದಲ್ಲಿ ಒಟ್ಟು ಎಷ್ಟು ಉದ್ಯೋಗ ವಿನಿಮಯ ಕೇಂದ್ರಗಳಿವೆ.*

ಆ) *ಇವುಗಳಲ್ಲಿ ಇಲ್ಲಿಯವರೆಗೆ ನೋಂದಾಯಿಸಿಕೊಂಡವರ ಸಂಖ್ಯೆ ಎಷ್ಟು?*

ಇ) *ಜನವರಿ 1997ರಿಂದ ಡಿಸೆಂಬರ್‌ರವರೆಗೆ ಒಟ್ಟು ಎಷ್ಟು ಜನರಿಗೆ ಈ ಉದ್ಯೋಗ ವಿನಿಮಯ ಕೇಂದ್ರಗಳಿಂದ ಉದ್ಯೋಗ ದೊರತಿದೆ?*

ಈ) *ರಾಜ್ಯದ ಹಲವಾರು ಸರ್ಕಾರಿ ಇಲಾಖೆಗಳು, ರಾಜ್ಯ ಸ್ವಾಮ್ಯದ ಕೈಗಾರಿಕೆಗಳು ವಿಶ್ವವಿದ್ಯಾಲಯಗಳು ನೇರವಾಗಿ ಅರ್ಜಿಗಳನ್ನು ಕರೆದು ನೇಮಕಾತಿ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಉ) *ಹಾಗಿದ್ದಲ್ಲಿ ಈ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರನ್ನು ನೊಂದಾಯಿಸಿರುವರಿಗೆ ತೊಂದರೆಯಾಗಿಲ್ಲವೆ?*

ಊ) *ಹಾಗಿದ್ದಲ್ಲಿ, ಈ ಉದ್ಯೋಗ ವಿನಿಮಯ ಕೇಂದ್ರಗಳನ್ನು ರದ್ದುಗೊಳಿಸಲು ಸರ್ಕಾರ ಉದ್ದೇಶಿಸಿದ್ದಾರೆಯೇ?*

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು) :

ಅ) 6

ಆ) ದಿನಾಂಕ : 31.3.98ರ ಅನ್ವಯ ನೋಂದಾಯಿತ ಅಭ್ಯರ್ಥಿಗಳ ಸಂಖ್ಯೆ 4,68,263.

ಇ) 5,762.

ಈ) ಹೌದು.

ಊ) ಇಲ್ಲ.

ಋ) ಇಲ್ಲ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೇ, ಉತ್ತರ ಏನೋ ಒದಗಿಸಿದ್ದಾರೆ. ಬೆಂಗಳೂರು ನಗರದಲ್ಲಿ 6 ಉದ್ಯೋಗ ವಿನಿಮಯ ಕೇಂದ್ರಗಳು ಇವೆ. ಅಲ್ಲಿ ಸುಮಾರು 4 ಲಕ್ಷ 69 ಸಾವಿರ ಜನ ನಿರುದ್ಯೋಗಿಗಳು ರಿಜಿಸ್ಟರ್ ಮಾಡಿದ್ದಾರೆ. 1997ರಲ್ಲಿ ಕೇವಲ 5762 ಜನರಿಗೆ ಮಾತ್ರ ಉದ್ಯೋಗ ಸಿಕ್ಕಿದೆ. ಉಳಿದ 4 ಲಕ್ಷ 65 ಸಾವಿರ ಜನಕ್ಕೆ ಉದ್ಯೋಗ ಸಿಕ್ಕಿಲ್ಲ. ಅವರಿಗೆ ನೀವು ಕೆಲಸ ಕೊಡುವುದಕ್ಕೆ ಆಗುವುದಿಲ್ಲ ಎಂದಾದರೂ ಹೇಳಿ. ಏಕೆ ಅಷ್ಟು ವರ್ಷಗಳಿಂದ ಇಟ್ಟುಕೊಂಡಿದ್ದೀರಿ? 10 ವರ್ಷಗಳಾದರೂ ಇಂಟರ್‌ವ್ಯೂ ಬರುವುದಿಲ್ಲ. ಇಂಟರ್‌ವ್ಯೂ ಬರುವುದಕ್ಕೆ ಇನ್‌ಫ್ಲೂಯೆನ್ಸ್ ಮಾಡಬೇಕು. ಮತ್ತೊಂದು ಸಂಗತಿ ಏನೆಂದರೆ ಬೆಂಗಳೂರು ಯೂನಿವರ್ಸಿಟಿಗಳು ಆಗಲಿ.....

ಅಧ್ಯಕ್ಷರು : ನಿಮ್ಮ ಅಭಿಪ್ರಾಯದಲ್ಲಿ ಅವರು ಡೈರೆಕ್ಟ್ ರಿಕ್ರೂಟ್‌ಮೆಂಟ್ಸ್ ಮಾಡುತ್ತಾರೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗಳನ್ನು ಕೇಳುವುದಿಲ್ಲ.

ಶ್ರೀ ರಾಮಲಿಂಗಾರೆಡ್ಡಿ : ಹೌದು. ಬೋರ್ಡ್ ಮತ್ತು ಕಾರ್ಪೊರೇಷನ್ ಅಷ್ಟೇ. ಆಟಾನಮಸ್ ಬಾಡೀಸ್ ಅಷ್ಟೇ. ಆಸ್ಪತ್ರೆಗಳಲ್ಲಿ ಅವರ ನೆಂಟರಿಸ್ಟರಿಗೆ ಮಾತ್ರ ಕೆಲಸ ಕೊಡುವುದು. ಬೇರೆಯವರಿಗೆ ಕೆಲಸ ಕೊಡುವುದಿಲ್ಲ ಮತ್ತು ಅವರು ರೋಸ್ಟರ್ ಸಿಸ್ಟಂ ಸಹ ಫಾಲೋ ಮಾಡುವುದಿಲ್ಲ.

ಅಧ್ಯಕ್ಷರು : ಮಾನ್ಯ ಮಂತ್ರಿಗಳೇ, ಅವರ ಪ್ರಶ್ನೆ ಇಷ್ಟೇ 4 ಲಕ್ಷ ಚಿಲ್ಲರೆ ಜನ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಿಸಿಕೊಂಡರೆ 5 ಸಾವಿರ ಜನಕ್ಕೆ ಉದ್ಯೋಗ ಸಿಗುತ್ತದೆ. ಆ ಒಂದು ಸೌಭಾಗ್ಯಕ್ಕೆ ಆ ಸಂಸ್ಥೆಯನ್ನು ಇಟ್ಟುಕೊಂಡು ಅದನ್ನು ಏಕೆ ಸಾಕುವುದು ಎಂದು ಅವರು ಹೇಳುವುದು. ಸುಮ್ಮನೆ ಅನಗತ್ಯವಾದ ಖರ್ಚು ಸರ್ಕಾರಕ್ಕೆ ಎಂದು.

ಶ್ರೀ ಬಿ. ಸತ್ಯನಾರಾಯಣ : ಮಾನ್ಯ ಅಧ್ಯಕ್ಷರೇ, 1959ನೇ ಉದ್ಯೋಗ ವಿನಿಮಯ ಕೇಂದ್ರಗಳ ಖಾಲಿ ಹುದ್ದೆಗಳ ಕಡ್ಡಾಯ ಅಧಿಸೂಚನೆ ಕಾಯ್ದೆ ಕೆಳಗಡೆ ಭರ್ತಿ ಪೂರ್ವದಲ್ಲಿ ಖಾಲಿ ಹುದ್ದೆಗಳನ್ನು ವಿನಿಮಯ ಕೇಂದ್ರಗಳಿಗೆ ಸೂಚಿಸುವುದು ಕಡ್ಡಾಯವಾಗಿದೆ. ಆದರೆ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕವೇ ನೇಮಕ ಮಾಡಿಕೊಳ್ಳಬೇಕೆನ್ನುವುದು ಕಡ್ಡಾಯವಾಗಿಲ್ಲ. ಆ ಕಾರಣದಿಂದ ಸಿ ಅಂಡ್ ಡಿ ಗ್ರೂಪ್ ಹುದ್ದೆಗಳನ್ನು ನಮ್ಮ ಸರ್ಕಾರದ ಆದೇಶದ ಮೇಲೆ....

ಅಧ್ಯಕ್ಷರು : ಸರಿ ಅವರ ಪ್ರಶ್ನೆ ಏನೆಂದರೆ ಅಷ್ಟಾದರೆ ಎಲ್ಲಾ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಇರುವ ಸಿಬ್ಬಂದಿ, ಕಛೇರಿ ಆದಕ್ಕೆ ಬಾಡಿಗೆ ಟೆಲಿಫೋನ್, ಜೀಪ್ ಈ ಖರ್ಚೆ ಎಲ್ಲಾ ಏಕೆ ಇಟ್ಟುಕೊಳ್ಳುತ್ತೀರಿ ಎಂದು. ಆ ಹಣವನ್ನು ಅಲ್ಲಿ ಖರ್ಚು ಮಾಡುವ ಬದಲು ಮಾನ್ಯ ಭೈರೇಗೌಡರಿಗೆ ಕೊಟ್ಟರೆ ಅವರು ಖರ್ಚು ಮಾಡುತ್ತಾರೆ. ಅದು ಉಪಯೋಗವಾಗುತ್ತದೆ. ಅವರಿಗೆ ಹಣ ಕೊಟ್ಟರೆ ಕೆರೆ ಹೂಳು ಎತ್ತಿಸುತ್ತಾರೆ. ನಿಮ್ಮ ಕುಕ್ಕರಹಳ್ಳಿ ಕೆರೆಗೂ ಹಣ ಕೊಡಿಸುತ್ತೇವೆ.

ಶ್ರೀ ಬಿ. ಸತ್ಯನಾರಾಯಣ : ಮಾನ್ಯ ಅಧ್ಯಕ್ಷರೇ, ಇದು ಕೇಂದ್ರ ಸರ್ಕಾರದ ಕಾಯ್ದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೈರೇಗೌಡರಿಗೆ ಹಣ ಕೊಟ್ಟರೆ ಆಮೇಲೆ ಅವರು ನೀವು ಹೇಳಿದಂತೆ ಕೇಳುತ್ತಾರೆ ಎನ್ನುವ ಗ್ಯಾರಂಟಿ ಏನು?

ಅಧ್ಯಕ್ಷರು : ನಾನು ಹೇಳಿದಂತೆ ಯಾರೂ ಕೇಳುವುದಿಲ್ಲ. ಸುಮ್ಮನೇ ಏಕೆ; ನಾನು ಆ ಭ್ರಮೆಯಲ್ಲಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಸತ್ಯಕ್ಕೆ ದೂರವಾದ ಮಾತು ತಾವು ಹೇಳಬಾರದು. ನೀವು ಹೇಳಿದಂತೆ ನಾವು ಕೇಳುವುದಿಲ್ಲವೇ ಹೇಳಿ. ನಾವು ಎಷ್ಟು ಸಾರಿ ನೀವು ಹೇಳಿದಂತೆ ಕೇಳಿದ್ದೇವೆ. ಮಾನ್ಯ ನಂಜೇಗೌಡರು ಕುಳಿತಿದ್ದಾರೆ ಕೇಳಿ. ನೀವು ಸುಮ್ಮನೆ ಸಾರಾಸಗಟಾಗಿ ಹೇಳಿದರೆ ಹೇಗೆ?

ಅಧ್ಯಕ್ಷರು : ಅಧಿಕಾರದಲ್ಲಿ ಇರುವವರು ಯಾರಾದರೂ ಕೇಳಿದರೆ ಕೆಲಸ ಆಗುತ್ತದೆ.

ಶ್ರೀ ಎಚ್.ಎನ್. ನಂಜೇಗೌಡ : ನೀವು ಹೇಳಿದ್ದು ಮಂತ್ರಿಗಳು ಹೇಳಿದಂತೆ ಕೇಳುವುದಿಲ್ಲ ಎಂದು.

ಅಧ್ಯಕ್ಷರು : ಇವರು ಬಂದರಲ್ಲಾ ಒಳ್ಳೆಯ ಟೈಮ್‌ಗೆ ಅಂದರೆ ಇವರು ತೊಂದರೆ ಮಾಡುವುದಕ್ಕೆ ಬಂದರು. ಉದ್ಯೋಗ ವಿನಿಮಯ ಕೇಂದ್ರಗಳು ಮುಂದುವರಿಯಬೇಕೇ ಎನ್ನುವುದು ಅವರ ಪ್ರಶ್ನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಮಾನ್ಯ ಅಧ್ಯಕ್ಷರೇ, ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯ ಅಧಿಕಾರಿಗಳು ಏನು ಇದ್ದಾರಲ್ಲಾ ಅವರು ಪ್ರತಿಯೊಂದು ತಾಲ್ಲೂಕಿಗೂ ಹೋಗಿ ನಿರುದ್ಯೋಗಿಗಳ ಹೆಸರುಗಳನ್ನು ನೋಂದಾಯಿಸಬೇಕೆನ್ನುವ ಕಾನೂನು ಇದೆ. ವರ್ಷದಲ್ಲಿ ನಾಲ್ಕು ಸಾರಿ ಹೋಗಿ ನೋಂದಾವಣೆ ಮಾಡಿಸಬೇಕೆಂದು ಇದೆ. ನಿಮ್ಮ ಅಧಿಕಾರಿಗಳು ತಾಲ್ಲೂಕು ಮಟ್ಟಕ್ಕೆ ಹೋಗುತ್ತಾರೋ ಇಲ್ಲವೋ ತಿಳಿಸಿ.

ಶ್ರೀ ಬಿ. ಸತ್ಯನಾರಾಯಣ : ತಾಲ್ಲೂಕು ಮಟ್ಟಕ್ಕೆ ಹೋಗಿ ನೋಂದಾವಣೆ ಮಾಡುವಂತಹ ಕೆಲಸ ಮಾಡುತ್ತಿದ್ದಾರೆ.

ಶ್ರೀ ಕೆ. ಜಯರಾಮಶೆಟ್ಟಿ : ಯಾರೂ ಹೋಗುತ್ತಿಲ್ಲ. ಎಲ್ಲಿಯೂ ಹೋಗುವುದಿಲ್ಲ.

ಅಧ್ಯಕ್ಷರು : ಈಗ ಅವರು ಹೋಗುತ್ತಾರೆಂದು ಅಧಿಕೃತವಾಗಿ ಹೇಳಿದ ಮೇಲೆ ನಾವು ಒಪ್ಪಿಕೊಳ್ಳಬೇಕು. ಅವರು ಹೋಗುತ್ತಿಲ್ಲ ಎನ್ನುವುದಕ್ಕೆ ನಿಮ್ಮ ಹತ್ತಿರ ಏನಾದರೂ ಸಾಕ್ಷಿ ಇದ್ದರೆ ನಾವು ಹೇಳಬಹುದು.

ಶ್ರೀ ಸಿದ್ದರಾಮಯ್ಯ : ಕೆಲವು ಕಡೆ ಹೋಗುತ್ತಾರೆ ಕೆಲವು ಕಡೆ ಹೋಗುತ್ತಿಲ್ಲ.

ಅಧ್ಯಕ್ಷರು : ಇಷ್ಟಕ್ಕದಾರೂ ಸತ್ಯ ಹೇಳಿದಿರಲ್ಲಾ. ಅಷ್ಟು ಸಾಕು ಬಿಡಿ.

ಶ್ರೀ ಎನ್. ಯೋಗೀಶ್‌ಭಟ್ : ಮಾನ್ಯ ಅಧ್ಯಕ್ಷರೇ, 8-10 ವರ್ಷಗಳಿಂದ ಸೀನಿಯಾರಿಟಿ ಲಿಸ್ಟ್‌ನಲ್ಲಿ ಇರುವ ಹೆಸರುಗಳನ್ನು ಬಿಟ್ಟುಕೊಂಡು ನಿನ್ನೆ ತಾನೇ ಯಾರು ಹೆಸರು ನೋಂದಾವಣೆ ಮಾಡಿರುತ್ತಾರೆ ಅವರಿಗೆ ಇಂಟರ್‌ವ್ಯೂಗೆ ಬಿಡುಗಡೆ ಮಾಡಿರತಕ್ಕಂಥ ಉದಾಹರಣೆಗಳು ಇವೆ. ಹಣದ ಆಧಾರದ ಮೇಲೆ ಸೀನಿಯಾರಿಟಿ ಬಿಟ್ಟು ಪಟ್ಟಿ ಬಿಡುಗಡೆ ಮಾಡಿರತಕ್ಕಂಥಾದ್ದು. ಇದನ್ನು ತಡೆಗಟ್ಟುವಲ್ಲಿ ಸರ್ಕಾರ ವಿಫಲವಾಗಿದೆ. ಫೈಲ್‌ಗಳೇ ಮಿಸ್ ಆಗುತ್ತಿವೆ.

ಶ್ರೀ ಬಿ. ಸತ್ಯನಾರಾಯಣ : ಮಾನ್ಯ ಅಧ್ಯಕ್ಷರೇ, ಕಾಯ್ದೆ ಒಳಗಡೆ ಇರತಕ್ಕಂಥ ನಿಯಮಗಳಿಗೆ ಅನುಸಾರವಾಗಿ ನಾವು ಹೆಸರುಗಳನ್ನು ಕಳುಹಿಸಬೇಕಾಗುತ್ತದೆ. ಉದ್ದಿಮೆದಾರರು ಯಾವ ಅರ್ಹತೆ ಇರುವ ಅಭ್ಯರ್ಥಿಗಳು ಬೇಕು ಎಂದು ಕೇಳುತ್ತಾರೋ ಅದನ್ನು ಮಾತ್ರ ನಾವು ಕಳುಹಿಸಿ ಕೊಡಬೇಕಾಗುತ್ತದೆ. ನಿಯಮಗಳ ಪ್ರಕಾರ, ರೋಸ್ಟರ್, ವಿದ್ಯಾರ್ಹತೆ ಸೇವೆ ಇವುಗಳನ್ನು ನಾವು ಪರಿಶೀಲನೆ ಮಾಡಿ ಕಳುಹಿಸಬೇಕಾಗುತ್ತದೆ.

ಅಧ್ಯಕ್ಷರು : ಉತ್ತರ ಚೆನ್ನಾಗಿದೆ. ಯೋಚನೆ ಮಾಡಿ ನೀವು ಮತ್ತು ಸಿದ್ದರಾಮಯ್ಯನವರು. ಈ ಉದ್ಯೋಗ ವಿನಿಮಯ ಕೇಂದ್ರಗಳು ಇರಬೇಕೇ ಬೇಡವೇ ಎನ್ನುವ ಬಗ್ಗೆ.

ಶ್ರೀ ಸಿದ್ದರಾಮಯ್ಯ : ಈ ಉದ್ಯೋಗ ವಿನಿಮಯ ಕೇಂದ್ರಗಳು ಐ ಟಿ ಐ ಗಳನ್ನು ನಡೆಸುತ್ತಿದೆ. ಆದರೆ ಅಲ್ಲಿ ಕೆಲವು ಲೋಪದೋಷಗಳು ಇರಬಹುದು. ಅವುಗಳನ್ನು ಸರಿಪಡಿಸತಕ್ಕಂಥ ಕೆಲಸವನ್ನು ಮಾಡೋಣ.

ಧಾರವಾಡ ಜಿಲ್ಲೆಯ ಅರಣ್ಯ ಇಲಾಖೆಯ ಕಾರ್ಯಕ್ರಮಗಳು

381 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣಾ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಧಾರವಾಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯವರು ಕಳೆದ 3 ವರ್ಷಗಳಲ್ಲಿ ಕೈಗೊಂಡ ಕಾರ್ಯಕ್ರಮಗಳಾವುವು, ಇದಕ್ಕಾಗಿ ಮಂಜೂರಾದ ಹಣವೆಷ್ಟು? ಮತ್ತು ಖರ್ಚಾದ ಹಣವೆಷ್ಟು ವಿವರ ನೀಡುವುದು?*

ಆ) *ಮುಂಬರುವ ವರ್ಷಗಳಲ್ಲಿ ಯಾವ ಕಾರ್ಯಕ್ರಮ ಮತ್ತು ಯೋಜನೆಗಳನ್ನು ಹಾಕಿಕೊಳ್ಳಲು ಯೋಜಿಸಲಾಗಿದೆ?*

ಶ್ರೀ. ಡಿ. ಮಂಜುನಾಥ್ (ಅರಣ್ಯ ಇಲಾಖೆ) :

ಅ) ಧಾರವಾಡ ಜಿಲ್ಲೆಯಲ್ಲಿ ಅರಣ್ಯ ಇಲಾಖಾವತಿಯಿಂದ ಕಳೆದ 3 ವರ್ಷಗಳಲ್ಲಿ ಕೈಗೊಂಡ ಕಾರ್ಯಕ್ರಮಗಳು ಈ ರೀತಿ ಇವೆ. ಸದರಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮಂಜೂರಾದ ಹಣ ಹಾಗೂ ಖರ್ಚು ಭರಿಸಿದ ವೆಚ್ಚದ ವಿವರಗಳನ್ನು ಸಹ ದಾಖಲಿಸಿದೆ.